ಸಿ–ಗುಂಪು	೧) ಶುಶ್ರೂಷಕರು	೧೬೨
	೨) ಹಿರಿಯ ಪುರುಷ ಆರೋಗ್ಯ ಸಹಾಯಕರು	೧೦೮
	೩) ವೈದ್ಯೇತರ ಕುಷ್ಠರೋಗ ಪರಿವೀಕ್ಷಕರು.	೧೨೬
	೪) ಕಿರಿಯ ಆರೋಗ್ಯ ಸಹಾಯಕರು	೭೦೩
	೫) ಆರೆ–ವೈದ್ಯರ ಕಾರ್ಯಕರ್ತರು	೪೩೮
	೬) ಪ್ರಯೋಗಶಾಲಾ ತಂತ್ರಜ್ಞರು	೬೬೮
	೭) ಫಾರ್ಮಸಿಸ್ಟ್	೪೦೦
	೮) ಮಹಿಳಾ ಆರೋಗ್ಯ ಸಂದರ್ಶಕರು	೧೧೪
	೯) ಕ್ಷೇತ್ರ ಆರೋಗ್ಯ ಶಿಕ್ಷಕರು	೨೫೧
	೧೦) ಪ್ರಥಮ ದರ್ಜೆ ಸಹಾಯಕರು	೬೨೩
	೧೧) ಸಹಾಯಕ-ಬೆರಳಚ್ಚುಗಾರರು	೧೨೯
	೧೨) ಹಿರಿಯ ಬೆರಳಚ್ಚುಗಾರರು	೩೬
	೧೩) ದ್ವಿತೀಯ ದರ್ಜೆ ಸಹಾಯಕರು	೪೦
	೧೪) ಇತರೆ ಹುದ್ದೆಗಳು	೫೭೭
	೧೫) ಕಿರಿಯ ಆರೋಗ್ಯ ಸಹಾಯಕಿಯರು	೫೫೩
	ಒಟ್ಟು	೫,೦೦೮
ಡಿ-ಗುಂಪು	೧) ಗ್ರೂಪ್-ಡಿ ನೌಕರರು	೨,೨೭೨

ವಿಷಯ:- ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯಕೀಯ ಚಿಕಿತ್ಸಾ ಕೇಂದ್ರಗಳ ಪ್ರಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬:- (೪೩೧)
ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ)
ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ರಾಜ್ಯದಲ್ಲಿ ಎಷ್ಟು ಪಶುವೈದ್ಯಕೀಯ ಚಿಕಿತ್ಸಾ ಕೇಂದ್ರಗಳನ್ನು ಹೊಸದಾಗಿ ಪ್ರಾರಂಭಿಸಲಾಗುವುದು;
ಆ) ಹಾಗಿದ್ದಲ್ಲಿ ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ.ಎನ್. ನಾಗೇಗೌಡ
(ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

೨೦೦

೬ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಉಳಿದ ೧೯ನ್ನು ಮಾರ್ಚ್ ೩೧ ರೊಳಗೆ ಪ್ರಾರಂಭಿಸಲಾಗುವುದು.

ವಿಷಯ:- ತುಮಕೂರು ಹಾಲು ಉತ್ಪಾದಕರ ಒಕ್ಕೂಟದಲ್ಲಾಗಿರುವ ನಷ್ಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೭೦:- (೪೪೦)
ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್)
ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು.

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಹಾಲು ಉತ್ಪಾದಕರ ಒಕ್ಕೂಟದಲ್ಲಿ ಆಗಿರುವ ನಷ್ಟ ಎಷ್ಟು ಹಾಗೂ ಈ ರೀತಿ ನಷ್ಟ ಆಗಲು ಕಾರಣಗಳೇನು;

ಆ) ತಾ ೩೧-೧೨-೩ ರವರೆಗೆ ಒಕ್ಕೂಟದಿಂದ ಉತ್ಪಾದಕರಿಗೆ ನೀಡಬೇಕಾದ ಹಣ ನೀಡದಿರಲು ಕಾರಣವೇನು;

ಇ) ಈ ಒಕ್ಕೂಟದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡು, ಈ ಸಂಸ್ಥೆ ಮುಂದೆ ಸರಿಯಾಗಿ ನಡೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಎನ್. ನಾಗೇಗೌಡ
(ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

೧೯೯೧-೯೨ರ ಅಂತ್ಯಕ್ಕೆ (ತಾತ್ಕಾಲಿಕ) ೭೨.೧೫ ಲಕ್ಷರೂ. ನಷ್ಟವಾಗಿರುತ್ತದೆ. ನಷ್ಟಕ್ಕೆ ಕಾರಣಗಳು ಈ ಕೆಳಕಂಡಂತೆ ಇರುತ್ತವೆ.

೧) ಹಾಲು ಖರೀದಿ ಮತ್ತು ಅಂತರ ಡೇರಿ ದರಗಳಲ್ಲಿನ ವ್ಯತ್ಯಾಸ.

೨) ಹಾಲು ಪರಿವರ್ತನೆ ಮತ್ತು ದಾಸ್ತಾನು ಶುಲ್ಕದಲ್ಲಿ ಹೆಚ್ಚಳ.

೩) ಹಾಲು ಸಾಗಾಣಿಕೆ, ಸಂಸ್ಕರಣೆ, ಮತ್ತು ಆಡಳಿತಾತ್ಮಕ ವೆಚ್ಚಗಳಲ್ಲಿನ ಹೆಚ್ಚಳ.

೪) ಮಾರುಕಟ್ಟೆಯಲ್ಲಿ ಹಾಲು ಉತ್ಪನ್ನಗಳ ಬೆಲೆಯು ಕಡಿಮೆಯಾದ್ದರಿಂದ.

ದಿನಾಂಕ ೩೧-೧೨-೯೨ರ ವರೆಗೆ ಹಾಲು ಉತ್ಪಾದಕರಿಗೆ ಹಣ ಪಾವತಿಸಲಾಗಿದೆ. ಹಾಲು ಸಮೃದ್ಧಿ ಕಾಲದಲ್ಲಿ ಹಾಲು ಶೇಖರಣೆಯು ದಿನಂಪ್ರತಿ ಸರಾಸರಿ ೧.೨೨ ಲಕ್ಷ ಕೆ.ಜಿ.ಇದ್ದು ಸ್ಥಳೀಯ ಹಾಲು ಮಾರಾಟವು ೫೫ ಸಾವಿರ ಲೀಟರ್ ಇದ್ದು ಹೆಚ್ಚುವರಿ ಹಾಲನ್ನು ಹಾಲು ಉತ್ಪನ್ನಗಳಾಗಿ ಪರಿವರ್ತಿಸಲಾಗಿದೆ. ಈ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತ ದರಗಳು ಇಲ್ಲದೆ ಇರುವ ಪ್ರಯುಕ್ತ ದಾಸ್ತಾನು ಮಾಡಲಾಗಿದ್ದು ಈ ಕಾರಣದಿಂದ ಹಣದ ಕೊರತೆ ಉಂಟಾಗಿದ್ದು ಉತ್ಪಾದಕರಿಗೆ ಹಣ ಪಾವತಿಯಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ.

ಈ ಒಕ್ಕೂಟದ ಬಗ್ಗೆ ಬಂದ ಹಲವಾರು ದೂರುಗಳ ಅನ್ವಯ ಸಹಕಾರಿ ಇಲಾಖೆಯು ವಿಚಾರಣೆಗೆ ಆದೇಶಿಸಿದ್ದು ಬೆಂಗಳೂರು ವಿಭಾಗದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ವಿಚಾರಣೆ ನಡೆಸುತ್ತಿದ್ದು ಇದು ಪ್ರಗತಿಯಲ್ಲಿದೆ.

ವಿಷಯ:- ಕುಣಿಗಲ್ ಕುದುರೆ ಫಾರಂ ಸರ್ಕಾರಕ್ಕೆ ವಾಪಸ್.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೭೧:- (೪೩೬)
ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್)
ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು.
ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಟರ್ಫ್ ಕ್ಲಬ್‌ನವರೊಡನೆ ಮಾಡಿಕೊಂಡಿದ್ದ ಗುತ್ತಿಗೆಯ ಅವಧಿ ಮುಗಿಯುವ ಮೊದಲೇ ಗುತ್ತಿಗೆಯನ್ನು ರದ್ದು ಮಾಡಿ, ಕುಣಿಗಲ್ ಕುದುರೆ ಫಾರಂ ಅನ್ನು ಸರ್ಕಾರ ವಾಪಸ್ಸು ಪಡೆಯಲು ಕಾರಣವೇನು?

ಆ) ವಾಪಸ್ಸು ಪಡೆಯುವಾಗ ಬಿ.ಟಿ.ಸಿ ಇಂದ ಒಪ್ಪಂದದ ಪ್ರಕಾರ ವಾಪಸ್ ಬರಬೇಕಾದ ಹಣ ಎಷ್ಟು?